

'ನಾತಿಚರಾಮಿ' ಚಿತ್ರದಲ್ಲಿ ಶ್ರುತಿ ಹರಿಹರನ್

ರೂಪದಲ್ಲೂ ಹಿರಿಯರ ಕಣ್ಮರೆಯನ್ನು ಗಮನಿಸಬೇಕು.

ಕರ್ನಾಟಕ ಸರ್ಕಾರ ಕೂಡ ಚಿತ್ರರಂಗದ ಹುಂಬತನಕ್ಕೆ ಸಾಥ್ ನೀಡುವಂತೆ ವರ್ತಿಸುತ್ತಿರುವುದು 2018ರ ಮತ್ತೊಂದು ವಿಶೇಷ. ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಹೊಂದಿಸಿಕೊಡಲು ಹೆಣಗುತ್ತಿರುವ ಸರ್ಕಾರ, ಅಂಬರೀಷ್‌ರ ಸ್ಮಾರಕ ನಿರ್ಮಾಣಕ್ಕೆ ಮುಂದಾಗಿ, ಕಂಠೀರವ ಸ್ಟುಡಿಯೋವನ್ನು ಸ್ಮಶಾನವಾಗಿಸಲು ಹೊರಟಿದೆ. ವರ್ಷದ ಕೊನೆಯಲ್ಲಿ, ಕರ್ನಾಟಕದ ಪ್ರವಾಸಿ ತಾಣಗಳಲ್ಲಿ ಚಿತ್ರೀಕರಣ ನಡೆಸುವ ಚಿತ್ರಗಳಿಗೆ 1ರಿಂದ 2.5 ಕೋಟಿ ರೂಪಾಯಿವರೆಗೆ ಪ್ರೋತ್ಸಾಹಧನ ಕೊಡಲು ಸರ್ಕಾರ ಮುಂದಾಗಿದೆ. ಪ್ರೋತ್ಸಾಹಧನದ ಸುದ್ದಿಯ ಬೆನ್ನಿಗೇ ಈಗಾಗಲೇ ಚಿತ್ರೀಕರಣ ಮುಗಿಸಿರುವ ಕೆಲವು ಚಿತ್ರತಂಡಗಳು ಕೂಡ ಪ್ರವಾಸಿನಕ್ಷೆಗಳನ್ನು ಬಿಡಿಸಿಕೊಂಡು ಕೂತಿರುವ ಬಿಂಬಗಳು ಗಾಂಧಿನಗರದಲ್ಲಿ ಕಾಣಿಸುತ್ತಿವೆ.

ಅಂಬರೀಷ್ ಶ್ರದ್ಧಾಂಜಲಿ ಅರ್ಪಿಸುವ ಸಂದರ್ಭದಲ್ಲಿ ಜಗ್ಗೇಶ್ ಅವರು, 'ಇನ್ನು ಮೇಲೆ ನಮ್ಮ ನಮ್ಮ ಸ್ಮಾರಕಗಳಿಗೆ ನಾವೇ ಜಾಗ ತೆಗೆದಿಟ್ಟುಕೊಂಡಿರುವುದು ಒಳ್ಳೆಯದು' ಎನ್ನುವ ಅರ್ಥದಲ್ಲಿ ಮಾತನಾಡಿದ್ದರು. ತನ್ನ ಸ್ಮಾರಕವನ್ನು ತಾನೇ ನಿರ್ಮಿಸಿಕೊಳ್ಳುವ ನಿಟ್ಟಿನಲ್ಲಿ ಕನ್ನಡ ಚಿತ್ರೋದ್ಯಮವಂತೂ ಮುಂದಡಿಯಿಡುತ್ತಿದೆ, ಆ ಪ್ರಯತ್ನವನ್ನು ಸಬ್ಸಿಡಿ–ಸವಲತ್ತುಗಳ ಮೂಲಕ ಸರ್ಕಾರವೂ ಬೆಂಬಲಿಸುತ್ತಿದೆ.

## ಡಬ್ಬಿಂಗ್ ಬಂತು ಬಂತು

ಡಬ್ಬಿಂಗ್ ಚಿತ್ರಗಳಿಗೆ ಅಧಿಕೃತವಾಗಿ ಪ್ರವೇಶ ದೊರೆತ ದೃಷ್ಟಿಯಿಂದಲೂ 2018ನ್ನು ಗುರ್ತಿಸಬೇಕು. ಈ ಮೂಲಕ ಕನ್ನಡ ಚಿತ್ರರಂಗ ಕೊನೆಗೂ ತನ್ನ ಸುರಕ್ಷಿತಾ ವಲಯವನ್ನು ಸಡಿಲಗೊಳಿಸಿದೆ.

2017ರಲ್ಲೇ 'ಸತ್ಯದೇವ ಐಪಿಎಸ್', 'ವೇಗ ಮತ್ತು ಉದ್ವೇಗ' ಹಾಗೂ 'ಧೀರ' ಎನ್ನುವ ಚಿತ್ರಗಳ ಮೂಲಕ ಕನ್ನಡದಲ್ಲಿ ಡಬ್ಬಿಂಗ್ ಶಕೆ ಮರುಕಳಿಸಿತ್ತು. 2018ರಲ್ಲಿ ಅಜಿತ್ ನಟನೆಯ ತಮಿಳಿನ 'ವಿವೇಗಂ' ಕನ್ನಡದಲ್ಲಿ 'ಕಮಾಂಡೊ' ಹೆಸರಿನಲ್ಲಿ, ಕನ್ನಡ ಚಿತ್ರಗಳ ರಾಜಮಾರ್ಗವಾದ ಕೆಂಪೇಗೌಡ ರಸ್ತೆಯ ಚಿತ್ರಮಂದಿರದಲ್ಲೇ ತೆರೆಕಾಣುವ ಮೂಲಕ ಡಬ್ಬಿಂಗ್ ಚಿತ್ರಗಳ ಬಿಡುಗಡೆಗೆ ಗಾಂಧಿನಗರ ಸಂಪೂರ್ಣವಾಗಿ ಮುಕ್ತವಾಯಿತು. ಇನ್ನು ವರ್ಷದ ಕೊನೆಗೆ, ಯಶ್‌ರ 'ಕೆಜಿಎಫ್' ಚಿತ್ರದ ಕನ್ನಡೇತರ ಭಾಷೆಯ ಅವತರಣಿಕೆಯ ಚಿತ್ರಗಳೂ ಕರ್ನಾಟಕದಲ್ಲಿ ತೆರೆಕಂಡಿವೆ. ಮುಂದಿನ ದಿನಗಳಲ್ಲಿ ತಮಿಳಿನ ರಜನಿಕಾಂತ್, ವಿಜಯ್‌ರದೋ ತೆಲುಗಿನ ಜೂನಿಯರ್ ಎನ್‌ಟಿಆರ್, ಮಹೇಶ್‌ಬಾಬು, ಅಲ್ಲು ಅರ್ಜುನ್ ಅವರದೋ ಸಿನಿಮಾಗಳ ಆಯಾ ಭಾಷೆಗಳ ಆವೃತ್ತಿಯ ಜೊತೆಗೆ ಕನ್ನಡದ ಡಬ್ಬಿಂಗ್ ಆವೃತ್ತಿಗಳೂ ತೆರೆಕಾಣಬಹುದು.

'ಡಬ್ಬಿಂಗ್ ಚಿತ್ರಗಳು ತೆರೆಕಾಣಲು ಅವಕಾಶ ದೊರೆತಿರುವುದು ಪ್ರೇಕ್ಷಕನಿಗೆ ದೊರೆತ ಜಯ' ಎನ್ನುವುದು ಡಬ್ಬಿಂಗ್‌ಪರವಾದಿಗಳ ಸಂತೋಷ. ಆದರೆ, ಸುಮಾರು ಐದು ದಶಕಗಳ ಕಾಲ ಡಬ್ಬಿಂಗ್ ಚಿತ್ರಗಳನ್ನು ವಿರೋಧಿಸುತ್ತ ಬಂದಿದ್ದ ಚಿತ್ರರಂಗದ ಹೋರಾಟಕ್ಕೆ, ನೈತಿಕ ನಿರ್ಬಂಧಕ್ಕೆ ಮಂಗಳ ಹಾಡಿದ್ದನ್ನು ಹೇಗೆ ಅರ್ಥೈಸುವುದು? ಪರಂಪರೆಯ ಬಗ್ಗೆ ಅವಜ್ಞೆ, ನಿರ್ಲಕ್ಷ್ಯ ಕನ್ನಡ ಚಿತ್ರರಂಗಕ್ಕೆ ಹೊಸತಲ್ಲ ಎನ್ನುವ ಸತ್ಯ ಪ್ರೇಕ್ಷಕರ ಸಂದರ್ಭದಲ್ಲೂ ಸತ್ಯವೇ ಎನ್ನುವ ಪ್ರಶ್ನೆಗೆ ಕಾಲವೇ ಉತ್ತರ ನೀಡಬೇಕಾಗಿದೆ.

ವರ್ಷದ ಕೊನೆಗೆ ಬಿಡುಗಡೆಯಾಗಲಿರುವ 'ನಾತಿಚರಾಮಿ' ನಿರೀಕ್ಷೆ ಹುಟ್ಟಿಸಿರುವ ಚಿತ್ರ. ಈ ಚಿತ್ರದ ನಿರ್ದೇಶಕ ಮಂಸೋರೆ ಅವರ ಚೊಚ್ಚಿಲ ಚಿತ್ರ 'ಹರಿವು' ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿಗಳನ್ನು ಪಡೆದಿತ್ತು. 'ನಾತಿಚರಾಮಿ' ಕೂಡ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗಿಯಾಗಿರುವ ಸಿನಿಮಾ. ಹೆಣ್ಣಿನ ಅಂತರಂಗದ ಪಿಸುನುಡಿಗಳ ಅಭಿವ್ಯಕ್ತಿಯಂತೆ ಭಾಸವಾಗುತ್ತಿರುವ ಈ ಚಿತ್ರದ ಮುಖ್ಯಪಾತ್ರಗಳಲ್ಲಿ ಶ್ರುತಿ ಹರಿಹರನ್ ಹಾಗೂ ಸಂಚಾರಿ ವಿಜಯ್ ಕಾಣಿಸುತ್ತಿದ್ದಾರೆ.

2018ರ ಎಲ್ಲ ನಿರಾಶೆಗಳ ನಡುವೆಯೂ ವರ್ಷದ ಕೊನೆಗೆ ತೆರೆಕಂಡಿರುವ 'ಕೆಜಿಎಫ್' ಕನ್ನಡ ಚಿತ್ರೋದ್ಯಮದಲ್ಲಿ ಹೊಸ ಉತ್ಸಾಹ ಮೂಡಿಸಿರುವುದನ್ನು ಮರೆಯಬಾರದು. ಈ ಸಿನಿಮಾ ಕರ್ನಾಟಕದಲ್ಲಿ ಮಾತ್ರವಲ್ಲದೆ, ಇತರ ರಾಜ್ಯಗಳಲ್ಲೂ ಸುದ್ದಿ ಮಾಡುತ್ತಿದೆ. 'ಕೆಜಿಎಫ್' ಆರಂಭಿಕ ಯಶಸ್ಸು ದೀರ್ಘವಾದಲ್ಲಿ 2019ರಲ್ಲಿ ಕನ್ನಡ ಚಿತ್ರರಂಗ ಮತ್ತೆ ಚೇತರಿಕೆಯ ಹಾದಿ ಹಿಡಿಯಬಹುದು. ಒಂದೆರಡು ಸಿನಿಮಾಗಳ ದೊಡ್ಡ ಯಶಸ್ಸು ಚಿತ್ರೋದ್ಯಮವನ್ನು ಹಣಕಾಸಿನ ನೆಲೆಗಟ್ಟಿನಲ್ಲಿ ಎದ್ದುನಿಲ್ಲಿಸಬಹುದು. ಆದರೆ, ನೈತಿಕ ನೆಲೆಗಟ್ಟು, ನಾಡು–ನುಡಿಗೆ ಸಂಬಂಧಿಸಿದ ಬದ್ಧತೆಯ ಚೌಕಟ್ಟು ಅಷ್ಟು ಸುಲಭದಲ್ಲಿ ದಕ್ಕುವಂತಹದ್ದಲ್ಲ. ನಿಜವಾದ ಆತಂಕ ಇರುವುದು ಸಿನಿಮಾಗಳ ಸೋಲಿನಲ್ಲಲ್ಲ – ಸಿನಿಮಾ ಹಾಗೂ ಸಿನಿಮಾ ಮಂದಿ ಬಿಟ್ಟುಕೊಡುತ್ತಿರುವ ಮೌಲ್ಯಗಳಲ್ಲಿ. ■